# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1257 |
| ಸದಸ್ಯರ ಹೆಸರು | : ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 17.12.2025 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪಶುಗಳ ತುರ್ತು ಚಿಕಿತ್ಸೆಗೆ ನೆರವಾಗಲು ಪಶು ಸಂಜೀವಿನಿ ಯೋಜನೆ ರೂಪಿಸಿ ಲೋಕಾರ್ಪಣೆಗೊಳಿಸಲಾಗಿದೆಯೇ: | ರಾಜ್ಯದಲ್ಲಿ ಪಶುಗಳ ತುರ್ತು ಚಿಕಿತ್ಸೆಗೆ ನೆರವಾಗಲು ಪಶು ಸಂಜೀವಿನಿ ಯೋಜನೆ ರೂಪಿಸಿ, ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳನ್ನು ಲೋಕಾರ್ಪಣೆಗೊಳಿಸಲಾಗಿರುತ್ತದೆ. |
| ಆ) | ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಅಂಬುಲೆನ್ಸ್ ಗಳನ್ನು ನಿಯೋಜಿಸಲಾಗಿದೆ; | ಬೆಂಗಳೂರು ನಗರ ಜಿಲ್ಲೆಗೆ ಒಟ್ಟು 8 ಸಂಚಾರಿ ಪಶುಚಿಕಿತ್ಸಾ ಘಟಕ ವಾಹನ (ವೆಟರಿನರಿ ಆಂಬ್ಯುಲೆನ್ಸ್) ಗಳನ್ನು ನಿಯೋಜಿಸಲಾಗಿದೆ. |
| ಇ) | ಈ ಯೋಜನೆಯ ಅನುಷ್ಠಾನಕ್ಕಾಗಿ ಎಷ್ಟು ಆಂಬ್ಯುಲೆನ್ಸ್ ಗಳನ್ನು ನಿಯೋಜಿಸಲಾಗಿದೆ: | ಯೋಜನೆಯ ಅನುಷ್ಠಾನಕ್ಕಾಗಿ ಒಟ್ಟು 275 ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳನ್ನು(ವೆಟರಿನರಿ ಆಂಬ್ಯುಲೆನ್ಸ್) ರಾಜ್ಯದ 31 ಜಿಲ್ಲೆಗಳಲ್ಲಿ ಕಾರ್ಯಾಚರಣೆಗೊಳಿಸಲಾಗಿದೆ. |
| ಈ) | ಪ್ರತಿ ಅಂಬುಲೆನ್ಸ್‌ಗೆ ಸಂಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು: | ಪ್ರತಿ ಸಂಚಾರಿ ಪಶುಚಿಕಿತ್ಸಾ ಘಟಕ ವಾಹನ (ವೆಟರಿನರಿ ಆಂಬ್ಯುಲೆನ್ಸ್) ಗಳಲ್ಲಿ ಒಬ್ಬ ಪಶುವೈದ್ಯರು, ಒಬ್ಬ ಅರೆ ತಾಂತ್ರಿಕ ಸಿಬ್ಬಂದಿ ಮತ್ತು ಒಬ್ಬ ಡ್ರೈವರ್ ಕಮ್ ಅಟೆಂಡರ್‌ಗಳನ್ನು ಸೇವಾ ಪೂರೈಕೆದಾರರ ಮುಖಾಂತರ ನಿಯೋಜಿಸಲಾಗಿದೆ. |
| ಉ) | ಇದುವರೆಗೂ ಸದರಿ ಯೋಜನೆಯ ಮೂಲಕ ಎಷ್ಟು ಜಾನುವಾರುಗಳಿಗೆ ತುರ್ತು ಸೇವೆ ಒದಗಿಸಲಾಗಿದೆ? (ವಿವರ ಒದಗಿಸುವುದು) | 275 ಸಂಚಾರಿ ಪಶುಚಿಕಿತ್ಸಾ ಘಟಕ ವಾಹನಗಳ ಮೂಲಕ 2023-24 ನೇ ಸಾಲಿನಿಂದ ನವೆಂಬರ್-25 ರ ವರೆಗೆ ಒಟ್ಟು 7.84 ಲಕ್ಷ ಜಾನುವಾರುಗಳಿಗೆ ರೈತರ ಮನೆ ಬಾಗಿಲಿಗೆ ತೆರಳಿ ತುರ್ತು ಚಿಕಿತ್ಸೆ ನೀಡಲಾಗಿದೆ. |

| ಕ್ರ. ಸಂ | ವಿವರಗಳು | 2023-24 | 2024-25 | 2025-26 | ಒಟ್ಟು |
|---|---|---|---|---|---|
| 1 | ರೈತರ ಮನ ಬಾಗಿಲಿಗೆ ತೆರಳಿಚಿಕಿತ್ಸೆ ನೀಡಲಾದ ಜಾನುವಾರುಗಳ ಸಂಖ್ಯೆ | 151315 | 365398 | 267018 | **783731** |

**ಸಂಖ್ಯೆ:ಪಸಂಮೀ 284 ಸಲೆವಿ 2025**

(ಕೆ. ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು